# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 376 (311) |
| ಸದಸ್ಯರ ಹೆಸರು | : | ಶ್ರೀ ಸುನೀಲ್ ವಲ್ಯಾಪುರ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ಸಚಿವರು | : | ಮಾನ್ಯ ಕಂದಾಯ ಸಚಿವರು |
| ಉತ್ತರಿಸುವ ದಿನಾಂಕ | : | 23.09.2020 |

| ಕ್ರ.. | ಪ್ರಶ್ನೆ | ಉತ್ತರ |
|---|---|---|
| ಅ | ಕಂದಾಯ ಇಲಾಖೆಯಲ್ಲಿ ಕಳೆದ ಮೂರು ವರ್ಷಗಳಿಂದ ಕಲಬುರಗಿ, ಬೀದರ್, ಯಾದಗಿರಿ, ರಾಯಚೂರು, ಕೊಪ್ಪಳ, ಬಳ್ಳಾರಿ, ವಿಜಯಪುರ ಬಾಗಲಕೋಟೆ ಈ ಜಿಲ್ಲೆಗಳಲ್ಲಿ ಇರುವ ಒಟ್ಟು ನ್ಯಾಯಾಲಯ ಪ್ರಕರಣಗಳ ಸಂಖ್ಯೆ ಎಷ್ಟು; (ಪ್ರಾದೇಶಿಕ ಆಯುಕ್ತವಾರು, ಜಿಲ್ಲಾಧಿಕಾರಿವಾರು, ಸಹಾಯಕ ಆಯುಕ್ತರವಾರು ಹಾಗೂ ತಾಲ್ಲೂಕು ತಹಶೀಲ್ದಾರ್‌ವಾರು ದಂಡಾಧಿಕಾರಿಗಳವಾರು ವಿವರ ನೀಡುವುದು) | ಪ್ರಶ್ನೆ ಕ್ರಮ ಸಂಖ್ಯೆ(ಅ)(ಆ) &(ಇ)ಗಳಿಗೆ ಉತ್ತರಗಳನ್ನು ಅನುಬಂಧ-1ರಲ್ಲಿ ನೀಡಲಾಗಿದೆ. |
| ಆ | ಇದರಲ್ಲಿ ಇತ್ಯರ್ಥವಾದ ಹಾಗೂ ಇತ್ಯರ್ಥವಾಗಬೇಕಾಗಿರುವ ಪ್ರಕರಣಗಳ ಸಂಖ್ಯೆ ಎಷ್ಟು; (ಪ್ರಾದೇಶಿಕ ಆಯುಕ್ತವಾರು, ಜಿಲ್ಲಾಧಿಕಾರಿವಾರು, ಸಹಾಯಕ ಆಯುಕ್ತರವಾರು ಹಾಗೂ ತಾಲ್ಲೂಕು ತಹಶೀಲ್ದಾರ್‌ವಾರು ದಂಡವಾಧಿಕಾರಿಗಳವಾರು ವಿವರ ನೀಡುವುದು) | |
| ಇ | ಇದರಲ್ಲಿ ಭೂ ಕಂದಾಯ, ಭೂಸುಧಾರಣೆ ಹಾಗೂ ಭೂ ಮಂಜೂರಾತಿಗೆ ಸಂಬಂಧಿಸಿದಂತೆ ಎಷ್ಟು ಪ್ರಕರಣಗಳಿವೆ; ಅದರಲ್ಲಿ ಇತ್ಯರ್ಥವಾದ ಹಾಗೂ ಇತ್ಯರ್ಥವಾಗದೇ ಇರುವ ಪ್ರಕರಣಗಳ ಸಂಖ್ಯೆ ಎಷ್ಟು; (ಪ್ರಾದೇಶಿಕ ಆಯುಕ್ತವಾರು, ಜಿಲ್ಲಾಧಿಕಾರಿವಾರು, ಸಹಾಯಕ ಆಯುಕ್ತರವಾರು ಹಾಗೂ ತಾಲ್ಲೂಕು ತಹಶೀಲ್ದಾರ್‌ವಾರು ದಂಡಾಧಿಕಾರಿಗಳವಾರು ವಿವರ ನೀಡುವುದು) | |

| | | |
|---|---|---|
| ಈ | ಸದರಿ ಪ್ರಕರಣಗಳು ವರ್ಷಗಟ್ಟಲೇ ನಡೆಯುತ್ತಿದ್ದು, ಪ್ರಕರಣಗಳ ತ್ವರಿತ ಇತ್ಯರ್ಥಕ್ಕೆ ಸರ್ಕಾರವು ಕೈಗೊಂಡ ಕ್ರಮಗಳೇನು? | ಕಂದಾಯ ನ್ಯಾಯಾಲಯಗಳಲ್ಲಿ ದಾಖಲಾಗುವ ಪ್ರಕರಣಗಳ ವಿಚಾರಣೆಯನ್ನು ಆದ್ಯತೆ ಮೇರೆಗೆ ನಡೆಸಿ ಇತ್ಯರ್ಥಪಡಿಸುವಂತೆ ಪ್ರತಿ ಕಂದಾಯ ಅಧಿಕಾರಿಗಳ ಸಭೆಗಳಲ್ಲೂ ಸೂಚನೆಗಳನ್ನು ನೀಡಲಾಗುತ್ತಿದೆ. ಪೀಠಾಧಿಕಾರಿಗಳು ಅನ್ಯ ಕಾರ್ಯದಲ್ಲಿ ನಿರತರಾಗಿದ್ದ ಸಂದರ್ಭದಲ್ಲಿ ಅದೇ ಕಛೇರಿಯ ಅಧೀನ ಅಧಿಕಾರಿಯನ್ನು ಕೋರ್ಟ್ ಅಧಿಕಾರಿ ಎಂದು ನೇಮಕ ಮಾಡಿ, ಪ್ರಕರಣಗಳ ತ್ವರಿತಗತಿಯ ವಿಲೇವಾರಿಗೆ ಅರೆ ನ್ಯಾಯಿಕ ಪ್ರಾಧಿಕಾರಗಳು ಕ್ರಮ ವಹಿಸಬೇಕೆಂದು ಸೂಚನೆ ನೀಡಲಾಗಿದೆ.<br>ಪ್ರತಿ ವಾರ ಕನಿಷ್ಠ 2 ರಿಂದ 3 ಬಾರಿ ನಿಯತಕಾಲಿಕವಾಗಿ ವಿಚಾರಣೆಗಳನ್ನು ನಿಗಧಿಪಡಿಸಿ ತ್ವರಿತಗತಿಯಲ್ಲಿ ಇತ್ಯರ್ಥ ಮಾಡಲು ತೀರ್ಪಿಗಾಗಿ ಕಾಯ್ದಿರಿಸಿದ ಪ್ರಕರಣಗಳಲ್ಲಿ ಯಾವುದೇ ವಿಳಂಬವಿಲ್ಲದೆ ಆದೇಶಗಳನ್ನು ಘೋಷಣೆ ಮಾಡುವುದಕ್ಕೆ ಕ್ರಮ ಕೈಗೊಳ್ಳಲು ಸೂಚನೆಗಳನ್ನು ನೀಡಲಾಗಿರುತ್ತದೆ. ಪ್ರಕರಣ ಗಳನ್ನು ತೀವ್ರಗತಿಯಲ್ಲಿ ವಿಲೇವಾರಿ ಮಾಡುವ ದೃಷ್ಟಿಯಿಂದ Revenue Court Case Monitoring System (RCCMS) ತಂತ್ರಾಂಶವನ್ನು ರಾಜ್ಯದ ಎಲ್ಲಾ ಜಿಲ್ಲೆಯಲ್ಲಿರುವ ಕಂದಾಯ ಇಲಾಖೆಯ ಕಛೇರಿಯಲ್ಲಿ ಅನುಷ್ಠಾನಗೊಳಿಸಲು ಪ್ರಿಸೈಡಿಂಗ್ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ಪರಿಶೀಲನಾ ಸಮಿತಿ ರಚಿಸಿ ಸರ್ಕಾರವು ಆದೇಶ ಸಂಖ್ಯೆ:ಕಂಇ 152 ಎಲ್‌ಜಿಜಡ್ 2016, ದಿನಾಂಕ:04.03.2017ರನ್ವಯ ಆದೇಶ ಹೊರಡಿಸಲಾಗಿರುತ್ತದೆ. (ಪ್ರತಿ ಅನುಬಂಧ-2ರಲ್ಲಿ ಲಗತ್ತಿಸಿದೆ).<br>ಈ ತಂತ್ರಾಂಶದಲ್ಲಿ ಕಂದಾಯ ನ್ಯಾಯಾಲಯ ಗಳಲ್ಲಿ ದಾಖಲಾಗಿರುವ ಅರೆ ನ್ಯಾಯಿಕ ಪ್ರಕರಣಗಳು ನಿರ್ವಹಣೆಯಾಗುತ್ತಿದ್ದು, ಸಾರ್ವಜನಿಕರು ವಿಚಾರಣಾ ದಿನಾಂಕ, ಪ್ರಕರಣ ಹಂತದ ಮಾಹಿತಿ ಮತ್ತು ಆದೇಶದ ಪ್ರತಿಗಳನ್ನು ಆನ್‌ಲೈನ್ ಮೂಲಕವೇ ಪಡೆಯಲು ಅವಕಾಶ ಕಲ್ಪಿಸಲಾಗಿದೆ. |

ಸಂಖ್ಯೆ:ಆರ್‌ಡಿ/84/ಟಿಆರ್‌ಎಂ/2020

**(ಆರ್. ಅಶೋಕ)**
ಕಂದಾಯ ಸಚಿವರು
ಕರ್ನಾಟಕ ಸರ್ಕಾರ

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂ: 311**

**ಅನುಬಂಧ - 1**

| ಕ್ರ. ಸಂ. | ಕಚೇರಿಯ ಹೆಸರು | ಕಳೆದ 3 ವರ್ಷಗಳ ಪ್ರಕರಣಗಳ ವಿವರ | | | ಭೂ ಕಂದಾಯ, ಭೂ ಸುಧಾರಣೆ & ಭೂ ಮಂಜೂರಾತಿ ಪ್ರಕರಣಗಳ ವಿವರ | | | | | | | | |
|---|---|---|---|---|---|---|---|---|---|---|---|---|---|
| | | | | | ಭೂ ಕಂದಾಯ | | | ಭೂ ಸುಧಾರಣೆ | | | ಭೂ ಮಂಜೂರಾತಿ | | |
| | | ಒಟ್ಟು ಪ್ರಕರಣಗಳು | ಇತ್ಯರ್ಥವಾದ ಪ್ರಕರಣಗಳು | ಇತ್ಯರ್ಥವಾಗದ ಪ್ರಕರಣಗಳು | ಇತ್ಯರ್ಥ ವಾದ | ಇತ್ಯರ್ಥ ವಾಗದ | ಒಟ್ಟು | ಇತ್ಯರ್ಥ ವಾದ | ಇತ್ಯರ್ಥ ವಾಗದ | ಒಟ್ಟು | ಇತ್ಯರ್ಥ ವಾದ | ಇತ್ಯರ್ಥ ವಾಗದ | ಒಟ್ಟು |
| 1 | **ಪ್ರಾದೇಶಿಕ ಆಯುಕ್ತರು, ಬೆಳಗಾವಿ** | **26** | 25 | 1 | 0 | 0 | **0** | 0 | 1 | **1** | 0 | 0 | **0** |
| 2 | **ಜಿಲ್ಲಾಧಿಕಾರಿ, ಬಾಗಲಕೋಟೆ** | **273** | 154 | 119 | 154 | 119 | **273** | 0 | 0 | **0** | 0 | 0 | **0** |
| 3 | ಉಪವಿಭಾಗಾಧಿಕಾರಿ, ಬಾಗಲಕೋಟೆ | **357** | 169 | 188 | 169 | 188 | **357** | 0 | 0 | **0** | 0 | 0 | **0** |
| 4 | ಉಪವಿಭಾಗಾಧಿಕಾರಿ, ಜಮಖಂಡಿ | **574** | 314 | 260 | 314 | 260 | **574** | 0 | 0 | **0** | 0 | 0 | **0** |
| 5 | ತಹಶೀಲ್ದಾರ್, ಬಾಗಲಕೋಟೆ | **603** | 574 | 29 | 574 | 29 | **603** | 0 | 0 | **0** | 0 | 0 | **0** |
| 6 | ತಹಶೀಲ್ದಾರ್, ಬದಾಮಿ | **350** | 102 | 248 | 102 | 248 | **350** | 0 | 0 | **0** | 0 | 0 | **0** |
| 7 | ತಹಶೀಲ್ದಾರ್, ಹುನಗುಂದ | **282** | 189 | 93 | 189 | 93 | **282** | 0 | 0 | **0** | 0 | 0 | **0** |
| 8 | ತಹಶೀಲ್ದಾರ್, ಜಮಖಂಡಿ | **386** | 215 | 171 | 215 | 171 | **386** | 0 | 0 | **0** | 0 | 0 | **0** |
| 9 | ತಹಶೀಲ್ದಾರ್, ಮುಧೋಳ | **132** | 19 | 113 | 19 | 113 | **132** | 0 | 0 | **0** | 0 | 0 | **0** |
| 10 | ತಹಶೀಲ್ದಾರ್, ಬೀಳಗಿ | **672** | 504 | 168 | 504 | 168 | **672** | 0 | 0 | **0** | 0 | 0 | **0** |
| 11 | ತಹಶೀಲ್ದಾರ್, ಇಲಕಲ್ಲ | **121** | 53 | 68 | 53 | 68 | **121** | 0 | 0 | **0** | 0 | 0 | **0** |
| 12 | ತಹಶೀಲ್ದಾರ್, ಗುಳೇದಗುಡ್ಡ | **85** | 53 | 32 | 53 | 32 | **85** | 0 | 0 | **0** | 0 | 0 | **0** |
| 13 | ತಹಶೀಲ್ದಾರ್, ರಬಕವಿ-ಬನಹಟ್ಟಿ | **142** | 76 | 66 | 76 | 66 | **142** | 0 | 0 | **0** | 0 | 0 | **0** |
| 14 | **ಜಿಲ್ಲಾಧಿಕಾರಿ, ವಿಜಯಪುರ** | **791** | 716 | 75 | 0 | 0 | **0** | 0 | 0 | **0** | 0 | 0 | **0** |
| 15 | ಉಪವಿಭಾಗಾಧಿಕಾರಿ, ವಿಜಯಪುರ | **711** | 591 | 120 | 490 | 120 | **610** | 101 | 0 | **101** | 0 | 0 | **0** |
| 16 | ಉಪವಿಭಾಗಾಧಿಕಾರಿ, ಇಂಡಿ | **894** | 684 | 210 | 0 | 0 | **0** | 0 | 0 | **0** | 0 | 0 | **0** |
| 17 | ತಹಶೀಲ್ದಾರ, ವಿಜಯಪುರ | **684** | 452 | 232 | 0 | 0 | **0** | 0 | 0 | **0** | 0 | 0 | **0** |
| 18 | ತಹಶೀಲ್ದಾರ, ಬ. ಬಾಗೇವಾಡಿ | **154** | 125 | 29 | 0 | 0 | **0** | 0 | 0 | **0** | 0 | 0 | **0** |
| 19 | ತಹಶೀಲ್ದಾರ, ಮುದ್ದೇಬಿಹಾಳ | **457** | 387 | 70 | 0 | 0 | **0** | 0 | 0 | **0** | 0 | 0 | **0** |
| 20 | ತಹಶೀಲ್ದಾರ, ಇಂಡಿ | **448** | 356 | 92 | 0 | 0 | **0** | 0 | 0 | **0** | 0 | 0 | **0** |
| 21 | ತಹಶೀಲ್ದಾರ, ಸಿಂದಗಿ | **204** | 132 | 72 | 0 | 0 | **0** | 0 | 0 | **0** | 0 | 0 | **0** |
| 22 | ತಹಶೀಲ್ದಾರ, ದೇ. ಹಿಪ್ಪರಗಿ | **367** | 197 | 170 | 0 | 0 | **0** | 0 | 0 | **0** | 0 | 0 | **0** |
| 23 | ತಹಶೀಲ್ದಾರ, ತಿಕೋಟಾ | **331** | 308 | 23 | 0 | 0 | **0** | 0 | 0 | **0** | 0 | 0 | **0** |
| 24 | ತಹಶೀಲ್ದಾರ, ನಿಡಗುಂದಿ | **57** | 51 | 6 | 0 | 0 | **0** | 0 | 0 | **0** | 0 | 0 | **0** |
| 25 | ತಹಶೀಲ್ದಾರ, ತಾಳಿಕೋಟೆ | **215** | 209 | 6 | 0 | 0 | **0** | 0 | 0 | **0** | 0 | 0 | **0** |

| ಕ್ರ. ಸಂ. | ಕಚೇರಿಯ ಹೆಸರು | ಕಳೆದ 3 ವರ್ಷಗಳ ಪ್ರಕರಣಗಳ ವಿವರ | | | ಭೂ ಕಂದಾಯ, ಭೂ ಸುಧಾರಣೆ & ಭೂ ಮಂಜೂರಾತಿ ಪ್ರಕರಣಗಳ ವಿವರ | | | | | | | | |
|---|---|---|---|---|---|---|---|---|---|---|---|---|---|
| | | ಒಟ್ಟು ಪ್ರಕರಣಗಳು | ಇತ್ಯರ್ಥವಾದ ಪ್ರಕರಣಗಳು | ಇತ್ಯರ್ಥವಾಗದ ಪ್ರಕರಣಗಳು | ಭೂ ಕಂದಾಯ | | | ಭೂ ಸುಧಾರಣೆ | | | ಭೂ ಮಂಜೂರ | | |
| | | | | | ಇತ್ಯರ್ಥ ವಾದ | ಇತ್ಯರ್ಥ ವಾಗದ | ಒಟ್ಟು | ಇತ್ಯರ್ಥ ವಾದ | ಇತ್ಯರ್ಥ ವಾಗದ | ಒಟ್ಟು | ಇತ್ಯರ್ಥ ವಾದ | ಇತ್ಯರ್ಥ ವಾಗದ | ಒಟ್ಟು |
| 26 | ತಹಶೀಲ್ದಾರ, ಬಬಲೇಶ್ವರ | **296** | 296 | 0 | 0 | 0 | **0** | 0 | 0 | **0** | 0 | 0 | **0** |
| 27 | ತಹಶೀಲ್ದಾರ, ಚಡಚಣ | **126** | 126 | 0 | 0 | 0 | **0** | 0 | 0 | **0** | 0 | 0 | **0** |
| 28 | ತಹಶೀಲ್ದಾರ, ಕೋಲ್ಹಾರ | **39** | 39 | 0 | 0 | 0 | **0** | 0 | 0 | **0** | 0 | 0 | **0** |
| 29 | **ಪ್ರಾದೇಶಿಕ ಆಯುಕ್ತರು, ಕಲಬುರಗಿ** | **12** | 11 | 1 | 9 | 1 | **10** | 0 | 2 | **2** | 0 | 0 | **0** |
| 30 | **ಜಿಲ್ಲಾಧಿಕಾರಿ, ಕಲಬುರಗಿ** | **401** | 52 | 349 | 0 | 0 | **0** | 0 | 0 | **0** | 0 | 0 | **0** |
| 31 | ಉಪ ವಿಭಾಗಾಧಿಕಾರಿ, ಕಲಬುರಗಿ | **2302** | 764 | 1538 | 713 | 1455 | **2168** | 51 | 83 | **134** | 0 | 0 | **0** |
| 32 | ಉಪ ವಿಭಾಗಾಧಿಕಾರಿ, ಸೇಡಂ | **1013** | 453 | 560 | 417 | 555 | **972** | 36 | 5 | **41** | 0 | 0 | **0** |
| 33 | ತಹಶೀಲ್ದಾರ್, ಕಲಬುರಗಿ | **1156** | 742 | 414 | 742 | 414 | **1156** | 0 | 0 | **0** | 0 | 0 | **0** |
| 34 | ತಹಶೀಲ್ದಾರ್, ಕಮಲಾಪೂರ | **376** | 241 | 135 | 241 | 135 | **376** | 0 | 0 | **0** | 0 | 0 | **0** |
| 35 | ತಹಶೀಲ್ದಾರ್, ಜೇವರ್ಗಿ | **490** | 325 | 165 | 325 | 165 | **490** | 0 | 0 | **0** | 0 | 0 | **0** |
| 36 | ತಹಶೀಲ್ದಾರ್, ಯಡ್ರಾವಿ | **283** | 172 | 111 | 172 | 111 | **283** | 0 | 0 | **0** | 0 | 0 | **0** |
| 37 | ತಹಶೀಲ್ದಾರ್, ಅಫಜಲಪೂರ | **1109** | 492 | 617 | 492 | 617 | **1109** | 0 | 0 | **0** | 0 | 0 | **0** |
| 38 | ತಹಶೀಲ್ದಾರ್, ಆಳಂದ | **743** | 518 | 225 | 518 | 225 | **743** | 0 | 0 | **0** | 0 | 0 | **0** |
| 39 | ತಹಶೀಲ್ದಾರ್, ಸೇಡಂ | **312** | 173 | 139 | 173 | 139 | **312** | 0 | 0 | **0** | 0 | 0 | **0** |
| 40 | ತಹಶೀಲ್ದಾರ್, ಚಿತ್ತಾಪೂರ | **689** | 427 | 262 | 427 | 262 | **689** | 0 | 0 | **0** | 0 | 0 | **0** |
| 41 | ತಹಶೀಲ್ದಾರ್, ಶಹಾಬಾದ | **58** | 21 | 37 | 21 | 37 | **58** | 0 | 0 | **0** | 0 | 0 | **0** |
| 42 | ತಹಶೀಲ್ದಾರ್, ಕಾಳಗಿ | **709** | 408 | 301 | 408 | 301 | **709** | 0 | 0 | **0** | 0 | 0 | **0** |
| 43 | ತಹಶೀಲ್ದಾರ್, ಚಿಂಚೋಳಿ | **480** | 272 | 208 | 272 | 208 | **480** | 0 | 0 | **0** | 0 | 0 | **0** |
| 44 | **ಜಿಲ್ಲಾಧಿಕಾರಿಗಳ ಕಛೇರಿ ಬೀದರ್** | **560** | 240 | 320 | 240 | 320 | **560** | 0 | 0 | **0** | 0 | 0 | **0** |
| 45 | ಉಪ ವಿಭಾಗಾಧಿಕಾರಿ, ಬೀದರ್ | **467** | 185 | 282 | 139 | 266 | **405** | 46 | 16 | **62** | 0 | 0 | **0** |
| 46 | ಉಪ ವಿಭಾಗಾಧಿಕಾರಿ, ಬಸವಕಲ್ಯಾಣ | **389** | 168 | 221 | 168 | 221 | **389** | 0 | 0 | **0** | 0 | 0 | **0** |
| 47 | ತಹಶೀಲ್ದಾರ, ಬೀದರ | **653** | 221 | 432 | 221 | 432 | **653** | 0 | 0 | **0** | 0 | 0 | **0** |
| 48 | ತಹಶೀಲ್ದಾರ, ಔರಾದ(ಬಿ) | **378** | 157 | 221 | 157 | 221 | **378** | 0 | 0 | **0** | 0 | 0 | **0** |
| 49 | ತಹಶೀಲ್ದಾರ, ಕಮಲನಗರ | **144** | 106 | 38 | 106 | 38 | **144** | 0 | 0 | **0** | 0 | 0 | **0** |
| 50 | ತಹಶೀಲ್ದಾರ, ಬಸವಕಲ್ಯಾಣ | **358** | 310 | 48 | 310 | 48 | **358** | 0 | 0 | **0** | 0 | 0 | **0** |
| 51 | ತಹಶೀಲ್ದಾರ, ಭಾಲ್ಕಿ | **299** | 35 | 264 | 35 | 264 | **299** | 0 | 0 | **0** | 0 | 0 | **0** |
| 52 | ತಹಶೀಲ್ದಾರ, ಹುಮನಾಬಾದ | **154** | 50 | 104 | 50 | 104 | **154** | 0 | 0 | **0** | 0 | 0 | **0** |
| 53 | ತಹಶೀಲ್ದಾರ, ಚಿಟ್ಟಗುಪ್ಪ | **107** | 77 | 30 | 77 | 30 | **107** | 0 | 0 | **0** | 0 | 0 | **0** |
| 54 | **ಜಿಲ್ಲಾಧಿಕಾರಿ, ಯಾದಗಿರಿ** | **85** | 26 | 59 | 26 | 59 | **85** | 0 | 0 | **0** | 0 | 0 | **0** |

| ಕ್ರ. ಸಂ | ಕಚೇರಿಯ ಹೆಸರು | ಕಳೆದ 3 ವರ್ಷಗಳ ಪ್ರಕರಣಗಳ ವಿವರ | | | ಭೂ ಕಂದಾಯ, ಭೂ ಸುಧಾರಣೆ & ಭೂ ಮಂಜೂರಾತಿ ಪ್ರಕರಣಗಳ ವಿವರ | | | | | | | | |
|---|---|---|---|---|---|---|---|---|---|---|---|---|---|
| | | | | | ಭೂ ಕಂದಾಯ | | | ಭೂ ಸುಧಾರಣೆ | | | ಭೂ ಮಂಜೂರಾತಿ | | |
| | | ಒಟ್ಟು ಪ್ರಕರಣಗಳು | ಇತ್ಯರ್ಥವಾದ ಪ್ರಕರಣಗಳು | ಇತ್ಯರ್ಥವಾಗದ ಪ್ರಕರಣಗಳು | ಇತ್ಯರ್ಥ ವಾದ | ಇತ್ಯರ್ಥ ವಾಗದ | ಒಟ್ಟು | ಇತ್ಯರ್ಥ ವಾದ | ಇತ್ಯರ್ಥ ವಾಗದ | ಒಟ್ಟು | ಇತ್ಯರ್ಥ ವಾದ | ಇತ್ಯರ್ಥ ವಾಗದ | ಒಟ್ಟು |
| 55 | ಉಪ ವಿಭಾಗಾಧಿಕಾರಿ, ಯಾದಗಿರಿ | **618** | 274 | 344 | 198 | 344 | **542** | 76 | 0 | **76** | 0 | 0 | **0** |
| 56 | ತಹಶೀಲ್ದಾರ್, ಯಾದಗಿರಿ | **1245** | 955 | 290 | 955 | 290 | **1245** | 0 | 0 | **0** | 0 | 0 | **0** |
| 57 | ತಹಶೀಲ್ದಾರ್, ಶಹಾಪುರ | **248** | 107 | 141 | 107 | 141 | **248** | 0 | 0 | **0** | 0 | 0 | **0** |
| 58 | ತಹಶೀಲ್ದಾರ್, ಸುರಪುರ | **354** | 77 | 277 | 77 | 277 | **354** | 0 | 0 | **0** | 0 | 0 | **0** |
| 59 | ತಹಶೀಲ್ದಾರ್, ಗುರುಮಿಠಕಲ್ | **584** | 446 | 138 | 446 | 138 | **584** | 0 | 0 | **0** | 0 | 0 | **0** |
| 60 | ತಹಶೀಲ್ದಾರ್, ವಡಗೇರಾ | **274** | 225 | 49 | 225 | 49 | **274** | 0 | 0 | **0** | 0 | 0 | **0** |
| 61 | ತಹಶೀಲ್ದಾರ್, ಹುಣಸಗಿ | **228** | 160 | 68 | 160 | 68 | **228** | 0 | 0 | **0** | 0 | 0 | **0** |
| 62 | **ಜಿಲ್ಲಾಧಿಕಾರಿ, ಕೊಪ್ಪಳ** | **545** | 195 | 350 | 195 | 350 | **545** | 0 | 0 | **0** | 0 | 0 | **0** |
| 63 | ಉಪವಿಭಾಗಾಧಿಕಾರಿ, ಕೊಪ್ಪಳ | **1131** | 494 | 637 | 494 | 637 | **1131** | 643 | 0 | **643** | 0 | 0 | **0** |
| 64 | ತಹಶೀಲ್ದಾರ್, ಕೊಪ್ಪಳ | **1028** | 542 | 486 | 542 | 486 | **1028** | 0 | 0 | **0** | 0 | 0 | **0** |
| 65 | ತಹಶೀಲ್ದಾರ್, ಗಂಗಾವತಿ | **484** | 314 | 170 | 314 | 170 | **484** | 0 | 0 | **0** | 0 | 0 | **0** |
| 66 | ತಹಶೀಲ್ದಾರ್, ಕುಷ್ಟಗಿ | **1890** | 311 | 1579 | 311 | 1579 | **1890** | 0 | 0 | **0** | 0 | 0 | **0** |
| 67 | ತಹಶೀಲ್ದಾರ್, ಯಲಬುರ್ಗಾ | **672** | 205 | 467 | 205 | 467 | **672** | 0 | 0 | **0** | 0 | 0 | **0** |
| 68 | ತಹಶೀಲ್ದಾರ್, ಕುಕನೂರು | **316** | 151 | 165 | 151 | 165 | **316** | 0 | 0 | **0** | 0 | 0 | **0** |
| 69 | ತಹಶೀಲ್ದಾರ್, ಕನಕಗಿರಿ | **415** | 75 | 340 | 75 | 340 | **415** | 0 | 0 | **0** | 0 | 0 | **0** |
| 70 | ತಹಶೀಲ್ದಾರ್, ಕಾರಟಗಿ | **211** | 23 | 188 | 23 | 188 | **211** | 0 | 0 | **0** | 0 | 0 | **0** |
| 71 | **ಜಿಲ್ಲಾಧಿಕಾರಿ, ರಾಯಚೂರು** | **337** | 118 | 219 | 116 | 213 | **329** | 2 | 6 | **8** | 0 | 0 | **0** |
| 72 | ಉಪ ವಿಭಾಗಾಧಿಕಾರಿ, ರಾಯಚೂರು | **684** | 144 | 540 | 131 | 540 | **671** | 13 | 21 | **34** | 0 | 0 | **0** |
| 73 | ತಹಶೀಲ್ದಾರ್, ರಾಯಚೂರು | **1380** | 649 | 731 | 649 | 731 | **1380** | 0 | 0 | **0** | 0 | 0 | **0** |
| 74 | ತಹಶೀಲ್ದಾರ್, ಸಿಂಧನೂರು | **1728** | 1417 | 311 | 1417 | 311 | **1728** | 0 | 0 | **0** | 0 | 0 | **0** |
| 75 | ತಹಶೀಲ್ದಾರ್, ಲಿಂಗಸೂಗೂರು | **2498** | 2455 | 43 | 2455 | 43 | **2498** | 0 | 0 | **0** | 0 | 0 | **0** |
| 76 | ತಹಶೀಲ್ದಾರ್, ಮನವಿ | **663** | 341 | 322 | 341 | 322 | **663** | 0 | 0 | **0** | 0 | 0 | **0** |
| 77 | ತಹಶೀಲ್ದಾರ್ ದೇವದುರ್ಗ | **705** | 551 | 154 | 551 | 154 | **705** | 0 | 0 | **0** | 0 | 0 | **0** |
| 78 | ತಹಶೀಲ್ದಾರ್, ಶಿರವಾರ | **245** | 23 | 222 | 23 | 222 | **245** | 0 | 0 | **0** | 0 | 0 | **0** |
| 79 | ತಹಶೀಲ್ದಾರ್, ಮಸ್ಕಿ | **769** | 390 | 379 | 390 | 379 | **769** | 0 | 0 | **0** | 0 | 0 | **0** |
| 80 | **ಜಿಲ್ಲಾಧಿಕಾರಿ, ಬಳ್ಳಾರಿ** | **713** | 429 | 284 | 380 | 266 | **646** | 2 | 0 | **2** | 47 | 18 | **65** |
| 81 | ಉಪ ವಿಭಾಗಾಧಿಕಾರಿ, ಬಳ್ಳಾರಿ | **1289** | 332 | 957 | 315 | 835 | **1150** | 0 | 0 | **0** | 17 | 122 | **139** |
| 82 | ಉಪ ವಿಭಾಗಾಧಿಕಾರಿ, ಹೊಸಪೇಟೆ | **839** | 601 | 288 | 398 | 264 | **662** | 191 | 0 | **191** | 12 | 24 | **36** |
| 83 | ಉಪ ವಿಭಾಗಾಧಿಕಾರಿ, ಹರಪ್ಪನಹಳ್ಳಿ | **665** | 156 | 509 | 129 | 346 | **475** | 27 | 141 | **168** | 0 | 22 | **22** |

| ಕ್ರ. ಸಂ. | ಕಚೇರಿಯ ಹೆಸರು | ಕಳೆದ 3 ವರ್ಷಗಳ ಪ್ರಕರಣಗಳ ವಿವರ | | | ಭೂ ಕಂದಾಯ, ಭೂ ಸುಧಾರಣೆ & ಭೂ ಮಂಜೂರಾತಿ ಪ್ರಕರಣಗಳ ವಿವರ | | | | | | | | |
|---|---|---|---|---|---|---|---|---|---|---|---|---|---|
| | | | | | ಭೂ ಕಂದಾಯ | | | ಭೂ ಸುಧಾರಣೆ | | | ಭೂ ಮಂಜೂರಾತಿ | | |
| | | ಒಟ್ಟು ಪ್ರಕರಣಗಳು | ಇತ್ಯರ್ಥವಾದ ಪ್ರಕರಣಗಳು | ಇತ್ಯರ್ಥವಾಗದ ಪ್ರಕರಣಗಳು | ಇತ್ಯರ್ಥ ವಾದ | ಇತ್ಯರ್ಥ ವಾಗದ | ಒಟ್ಟು | ಇತ್ಯರ್ಥ ವಾದ | ಇತ್ಯರ್ಥ ವಾಗದ | ಒಟ್ಟು | ಇತ್ಯರ್ಥ ವಾದ | ಇತ್ಯರ್ಥ ವಾಗದ | ಒಟ್ಟು |
| 84 | ತಹಶೀಲ್ದಾರ್, ಬಳ್ಳಾರಿ | **1874** | 1001 | 873 | 1001 | 873 | **1874** | 0 | 0 | **0** | 0 | 0 | **0** |
| 85 | ತಹಶೀಲ್ದಾರ್, ಸಿರಗುಪ್ಪ | **1967** | 623 | 1344 | 623 | 1344 | **1967** | 0 | 0 | **0** | 0 | 0 | **0** |
| 86 | ತಹಶೀಲ್ದಾರ್, ಸಂಡೂರು | **667** | 373 | 294 | 373 | 294 | **667** | 0 | 0 | **0** | 0 | 0 | **0** |
| 87 | ತಹಶೀಲ್ದಾರ್, ಹೊಸಪೇಟೆ | **269** | 117 | 152 | 117 | 152 | **269** | 0 | 0 | **0** | 0 | 0 | **0** |
| 88 | ತಹಶೀಲ್ದಾರ್, ಕೂಡ್ಲಿಗಿ | **745** | 421 | 324 | 421 | 324 | **745** | 0 | 0 | **0** | 0 | 0 | **0** |
| 89 | ತಹಶೀಲ್ದಾರ್, ಎಚ್.ಬಿ. ಹಳ್ಳಿ | **472** | 327 | 145 | 327 | 145 | **472** | 0 | 0 | **0** | 0 | 0 | **0** |
| 90 | ತಹಶೀಲ್ದಾರ್, ಹಡಗಲಿ | **647** | 395 | 252 | 395 | 252 | **647** | 0 | 0 | **0** | 0 | 0 | **0** |
| 91 | ತಹಶೀಲ್ದಾರ್, ಹರಪನಹಳ್ಳಿ | **636** | 347 | 289 | 347 | 289 | **636** | 0 | 0 | **0** | 0 | 0 | **0** |
| 92 | ತಹಶೀಲ್ದಾರ್, ಕುರುಗೋಡು | **539** | 234 | 305 | 234 | 305 | **539** | 0 | 0 | **0** | 0 | 0 | **0** |
| 93 | ತಹಶೀಲ್ದಾರ್, ಕೊಟ್ಟೂರು | **323** | 263 | 60 | 263 | 60 | **323** | 0 | 0 | **0** | 0 | 0 | **0** |
| 94 | ತಹಶೀಲ್ದಾರ್, ಕಂಪ್ಲಿ | **154** | 69 | 85 | 69 | 85 | **154** | 0 | 0 | **0** | 0 | 0 | **0** |

ಅನುಬಂಧ-02

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: Revenue Court Cases Monitoring System (RCCMS) ತಂತ್ರಾಂಶವನ್ನು ಪರಿಣಾಮಕಾರಿಯಾಗಿ ಜಿಲ್ಲಾ / ಉಪವಿಭಾಗ / ತಾಲ್ಲೂಕು ಮಟ್ಟದಲ್ಲಿ ಅನುಷ್ಠಾನಗೊಳಿಸಲು ಸಮಿತಿಗಳನ್ನು ರಚಿಸುವ ಬಗ್ಗೆ.

ಓದಲಾಗಿದೆ: 1. ಸರ್ಕಾರದ ಸುತ್ತೋಲೆ ಸಂಖ್ಯೆ: ಆರ್‌ಡಿ 21 ಎಲ್‌ಜಿಪಿ 2016 ದಿನಾಂಕ: 20.08.2016

2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ ಇವರ ಪತ್ರ ಸಂಖ್ಯೆ: ಕಂಇ 19 ನ್ಯಾಪ್ರಸ. 2016 ದಿನಾಂಕ: 19-12-2016.

2. ಹೆಚ್ಚುವರಿ ಅಡ್ವೋಕೇಟ್ ಜನರಲ್, ಮಾನ್ಯ ಉಚ್ಚ ನ್ಯಾಯಾಲಯ. ಬೆಂಗಳೂರು ಇವರ ಪತ್ರ ದಿನಾಂಕ: 13-02-2017.

****

ಪ್ರಸ್ತಾವನೆ:

ಮೇಲೆ (1)ರಲ್ಲಿ ಓದಲಾದ ದಿನಾಂಕ: 20.08.2016ರ ಸುತ್ತೋಲೆಯಲ್ಲಿ ಜಿಲ್ಲಾಧಿಕಾರಿ/ ಉಪವಿಭಾಗಾಧಿಕಾರಿ/ತಹಶೀಲ್ದಾರ್ ನ್ಯಾಯಾಲಯಗಳಲ್ಲಿ ಕರ್ನಾಟಕ ಭೂ ಕಂದಾಯ ಕಾಯ್ದೆ, 1964 ಮತ್ತು ಇತರೆ ಕಾಯ್ದೆಯಡಿಯಲ್ಲಿ ಅರ್ಜಿಗಳು/ಮೇಲ್ಮನವಿ ಪ್ರಕರಣಗಳು ದಾಖಲಾಗಿದ್ದು, ಈ ಪ್ರಕರಣಗಳು ಅರೆನ್ಯಾಯಿಕ ಪ್ರಕರಣಗಳಾಗಿರುತ್ತವೆ. ಸಂಬಂಧಪಟ್ಟ ವಾದಿ ಮತ್ತು ಪ್ರತಿವಾದಿಗಳಿಗೆ ಹಾಗೂ ಅವಶ್ಯಕ ಇನ್ನಿತರೆ ಸಂಬಂಧಿಸಿದ ಪ್ರಾಧಿಕಾರಿಗಳಿಗೆ ನಿಯಮಾನುಸಾರ ನೋಟೀಸ್‌ಗಳನ್ನು ಶಾಸನಬದ್ಧ ಪ್ರಾಧಿಕಾರಗಳು ಜಾರಿ ಮಾಡಿ ಹೇಳಿಕೆ ದಾಖಲಾತಿಗಳನ್ನು ಪಡೆದು ಅಹವಾಲುಗಳನ್ನು ಆಲಿಸುವ ಮೂಲಕ ವಿಚಾರಣೆಯನ್ನು ನಡೆಸಿ ಕಾನೂನಿನನ್ವಯ ಅರೆ ನ್ಯಾಯಿಕ ಅಧಿಕಾರವನ್ನು ಚಲಾಯಿಸಿ ತೀರ್ಮ/ಆದೇಶಗಳನ್ನು ಹೊರಡಿಸುವ ಪ್ರಾಧಿಕಾರಗಳಾಗಿದ್ದು, ಈ ಪ್ರಾಧಿಕಾರಗಳು ಶಾಸನಬದ್ಧ ಅಧಿಕಾರವನ್ನು ಚಲಾಯಿಸಿ ನಿಯಮಾನುಸಾರ ಪ್ರಕರಣಗಳನ್ನು ಶೀಘ್ರ ಇತ್ಯರ್ಥಪಡಿಸುವಲ್ಲಿ ಕಂದಾಯ ಅಧಿಕಾರಿಗಳು ವಿಶೇಷ ಆಸಕ್ತಿ ವಹಿಸದೇ ಅನೇಕ ಪ್ರಕರಣಗಳಲ್ಲಿ ವಿಚಾರಣೆಗಳನ್ನು ನಡೆಸಲು ದಿನಾಂಕವನ್ನು ನಿಗದಿಪಡಿಸುವಲ್ಲಿ ತೀವ್ರ ವಿಳಂಬ ಮಾಡುವುದು, ವಿಚಾರಣೆ ನಡೆಸಿದಲ್ಲಿ ಮುಂದಿನ ವಿಚಾರಣೆ ದಿನಾಂಕವನ್ನು ಗೊತ್ತುಪಡಿಸುವಾಗ ಅನವಶ್ಯಕವಾಗಿ ಧೀರ್ಘ ಕಾಲದ ದಿನಾಂಕ ನೀಡುವುದು, ಇನ್ನು ಕೆಲವು ಪ್ರಕರಣಗಳನ್ನು ವಿಚಾರಣೆಯನ್ನು ಮುಕ್ತಾಯಗೊಳಿಸಿ, ತೀರ್ಪಿಗಾಗಿ ಕಾಯ್ದಿರಿಸಿದೆ ಎಂದು ಆದೇಶಿಸಿ ಒಂದು ವರ್ಷಕ್ಕೂ ಮೇಲ್ಪಟ್ಟು ತೀರ್ಪುಗಳನ್ನು ನೀಡದೇ ಇರುವ ಪ್ರಕರಣಗಳನ್ನೂ ಸಹ ಸರ್ಕಾರವು ಗಮನಿಸಿದೆ.

ಈ ದಿಸೆಯಲ್ಲಿ ಸರ್ಕಾರವು ತ್ವರಿತಗತಿಯಲ್ಲಿ ವಿಲೇವಾರಿಗಾಗಿ ಅರೆ ನ್ಯಾಯಿಕ ಪ್ರಾಧಿಕಾರಗಳು ಕ್ರಮವಹಿಸಬೇಕೆಂದು ಸೂಚನೆ ನೀಡಿದ್ದು, ಪ್ರತಿವಾರ ಕನಿಷ್ಟ 2 ರಿಂದ 3 ಬಾರಿ ನಿಯತಕಾಲಿಕವಾಗಿ ವಿಚಾರಣೆಗಳನ್ನು ನಿಗಧಿಪಡಿಸಿ ತ್ವರಿತ ಗತಿಯಲ್ಲಿ ಇತ್ಯರ್ಥ ಮಾಡಲು ತೀರ್ಪಿಗಾಗಿ ಕಾಯ್ದಿರಿಸಿದ ಪ್ರಕರಣಗಳಲ್ಲಿ ಯಾವುದೇ ವಿಳಂಬವಿಲ್ಲದೆ ಆದೇಶಗಳನ್ನು ಘೋಷಣೆ ಮಾಡುವುದಕ್ಕೆ ಕ್ರಮಕ್ಕೈಗೊಳ್ಳಲು ಸೂಚನೆಗಳನ್ನು ನೀಡಲಾಗಿದೆ.

ಕಂದಾಯ ಇಲಾಖೆಯಲ್ಲಿನ ಜಿಲ್ಲಾಧಿಕಾರಿಗಳ/ಉಪವಿಭಾಗಾಧಿಕಾರಿಗಳ/ತಹಶೀಲ್ದಾರ್‌ಗಳ ಅರೆನ್ಯಾಯಿಕ ಪ್ರಕರಣಗಳನ್ನು ತೀವ್ರ ಗತಿಯಲ್ಲಿ ವಿಲೇವಾರಿ ಮಾಡುವ ದೃಷ್ಟಿಯಿಂದ ಮೇಲೆ (2)ರಲ್ಲಿ ಓದಲಾದ ದಿನಾಂಕ: 19-12-2016ರ ಪತ್ರದಲ್ಲಿ Revenue Court Cases Monitoring System (RCCMS) ತಂತ್ರಾಂಶವನ್ನು ಎನ್.ಐ.ಸಿ. ಕರ್ನಾಟಕ ಘಟಕ, ಬೆಂಗಳೂರು ರವರು ಅಭಿವೃದ್ಧಿಪಡಿಸಿದ್ದು, ಈ ತಂತ್ರಾಂಶವನ್ನು ಬೀದರ್ ಜಿಲ್ಲೆಯಲ್ಲಿ ಪೂರ್ಣ ಪ್ರಮಾಣದಲ್ಲಿ ಹಾಗೂ ಕೆಲವು ಜಿಲ್ಲೆಗಳಲ್ಲಿ ಭಾಗಶ: ಪ್ರಾಯೋಗಿಕವಾಗಿ ಜಾರಿಗೊಳಿಸಲಾಗಿರುತ್ತದೆ. ಈ ತಂತ್ರಾಂಶವು ಬೀದರ್ ಜಿಲ್ಲೆಯಲ್ಲಿ ಯಶಸ್ವಿಯಾಗಿ ಅನುಷ್ಠಾನಗೊಂಡಿರುವುದರಿಂದ, ಸದರಿ ತಂತ್ರಾಂಶವನ್ನು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿರುವ ಕಂದಾಯ ಇಲಾಖೆಯ ಕಛೇರಿಗಳಲ್ಲಿ ಅನುಷ್ಠಾನಗೊಳಿಸಲು ನಿರ್ಧರಿಸಿ ಕಂದಾಯ ಇಲಾಖೆಯ ಎಲ್ಲಾ ಹಂತದ ಕಚೇರಿಗಳಲ್ಲಿ Revenue Court Cases Monitoring System (RCCMS) ತಂತ್ರಾಂಶವನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಪ್ರಿಸೈಡಿಂಗ್ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ಪರಿಶೀಲನಾ ಸಮಿತಿ (Monitoring Committee) ಗಳನ್ನು ಜಿಲ್ಲಾ/ಉಪವಿಭಾಗ/ತಾಲ್ಲೂಕು ಮಟ್ಟದಲ್ಲಿ ರಚಿಸಲು ಸರ್ಕಾರವು ನಿರ್ಧರಿಸಿದೆ. ಆದುದರಿಂದ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಕಂಇ 152 ಎಲ್‌ಜಿಜಡ್ 2016,**
**ಬೆಂಗಳೂರು ದಿನಾಂಕ: 04-03-2017.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕಂದಾಯ ಇಲಾಖೆಯ ಜಿಲ್ಲಾ / ಉಪ ವಿಭಾಗ / ತಾಲ್ಲೂಕು ಮಟ್ಟದಲ್ಲಿ Revenue Court Cases Monitoring System (RCCMS) ತಂತ್ರಾಂಶವನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಈ ಕೆಳಕಂಡಂತೆ ಸಮಿತಿಯನ್ನು ಈ ಕೆಳಕಂಡಂತೆ ರಚಿಸಿ ಆದೇಶಿಸಿದೆ.

I. **ಜಿಲ್ಲಾಮಟ್ಟದ ಪರಿಶೀಲನಾ ಸಮಿತಿ (District Level Monitoring Committee):**

| | | |
|---|---|---|
| 1. | ಅಪರ ಜಿಲ್ಲಾಧಿಕಾರಿ | ಅಧ್ಯಕ್ಷರು |
| 2. | ವ್ಯವಸ್ಥಾಪಕರು/ಶಿರಸ್ತೇದಾರರು (ನ್ಯಾಯಾಲಯ ಪ್ರಕರಣಗಳನ್ನು ನಿರ್ವಹಿಸುವ) | ಸದಸ್ಯ ಕಾರ್ಯದರ್ಶಿ |
| 3 | ವಿಷಯ ನಿರ್ವಾಹಕರು (ನ್ಯಾಯಾಲಯ ಪ್ರಕರಣಗಳನ್ನು ನಿರ್ವಹಿಸುವ) | ಸದಸ್ಯರು |
| 4. | DIO, NIC | ತಾಂತ್ರಿಕ ಸದಸ್ಯರು |
| 5. | ADIO, NIC | ತಾಂತ್ರಿಕ ಸದಸ್ಯರು |
| 6. | ಜಿಲ್ಲಾ ವ್ಯವಸ್ಥಾಪಕರು, ಇ-ಆಡಳಿತ | ತಾಂತ್ರಿಕ ಸದಸ್ಯರು |

II. ಉಪವಿಭಾಗ ಮಟ್ಟದ ಪರಿಶೀಲನಾ ಸಮಿತಿ (Sub-Division Level Monitoring Committee):

| | | |
|---|---|---|
| 1. | ಉಪ ವಿಭಾಗಾಧಿಕಾರಿ | ಅಧ್ಯಕ್ಷರು |
| 2. | ತಹಶೀಲ್ದಾರ್ ಗ್ರೇಡ್-2, ಉಪವಿಭಾಗಾಧಿಕಾರಿಗಳ ಕಛೇರಿ. | ಸದಸ್ಯ ಕಾರ್ಯದರ್ಶಿ |
| 3. | ವಿಷಯ ನಿರ್ವಾಹಕರು (ನ್ಯಾಯಾಲಯ ಪ್ರಕರಣಗಳನ್ನು ನಿರ್ವಹಿಸುವ) | ಸದಸ್ಯರು |
| 4. | ಭೂಮಿ ಕೋ-ಆರ್ಡಿನೇಟರ್ | ತಾಂತ್ರಿಕ ಸದಸ್ಯರು |
| 5. | ಸಕಾಲ ಸಮಾಲೋಚಕರು | ತಾಂತ್ರಿಕ ಸದಸ್ಯರು |

III. ತಾಲ್ಲೂಕು ಮಟ್ಟದ ಪರಿಶೀಲನಾ ಸಮಿತಿ (Taluk Level Monitoring Committee):

| | | |
|---|---|---|
| 1. | ತಹಶಿಲ್ದಾರ್ | ಅಧ್ಯಕ್ಷರು |
| 2. | ವ್ಯವಸ್ಥಾಪಕರು/ಶಿರಸ್ತೇದಾರರು (ನ್ಯಾಯಾಲಯ ಪ್ರಕರಣಗಳನ್ನು ನಿರ್ವಹಿಸುವ) | ಸದಸ್ಯ ಕಾರ್ಯದರ್ಶಿ |
| 3. | ವಿಷಯ ನಿರ್ವಾಹಕರು (ನ್ಯಾಯಾಲಯ ಪ್ರಕರಣಗಳನ್ನು ನಿರ್ವಹಿಸುವ) | ಸದಸ್ಯರು |
| 4. | ಭೂಮಿ ಕೋ-ಆರ್ಡಿನೇಟರ್ | ತಾಂತ್ರಿಕ ಸದಸ್ಯರು |
| 5. | ಸಕಾಲ ಸಮಾಲೋಚಕರು | ತಾಂತ್ರಿಕ ಸದಸ್ಯರು |

ಮೇಲ್ಕಂಡ ಪರಿಶೀಲನಾ ಸಮಿತಿಗಳು ಪ್ರತಿ ಶನಿವಾರ ಸಭೆಯನ್ನು ನಡೆಸಿ Revenue Court Cases Monitoring System (RCCMS) ತಂತ್ರಾಂಶದ ಅನುಷ್ಠಾನದ ಪ್ರಗತಿಯನ್ನು ಪರಿಶೀಲಿಸುವುದು. ಹಾಗೂ ಯಾವುದೇ ಸಮಸ್ಯೆಗಳಿದ್ದಲ್ಲಿ ಸಂಬಂಧಿಸಿದ DIO, NIC ರವರನ್ನು ಸಂಪರ್ಕಿಸಿ ಪರಿಹರಿಸಿಕೊಳ್ಳತಕ್ಕದ್ದು.

ಸಂಬಂಧಿಸಿದ ಜಿಲ್ಲೆಯ ಜಿಲ್ಲಾಧಿಕಾರಿಗಳು Revenue Court Cases Monitoring System (RCCMS) ತಂತ್ರಾಂಶವನ್ನು ಸಮರ್ಪಕವಾಗಿ ತಮ್ಮ ಜಿಲ್ಲೆಯ ಎಲ್ಲಾ ಹಂತಗಳಲ್ಲಿ ಅನುಷ್ಠಾನಗೊಳಿಸುತ್ತಿರುವ ಬಗ್ಗೆ ಪ್ರತಿ ಮಾಹೆಯ ಕಂದಾಯ ಅಧಿಕಾರಿಗಳ ಸಭೆಯಲ್ಲಿ ಪರಾಮರ್ಶಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

o/c

04/03/2017

(ಟಿ.ಸಿ.ಕಾಂತರಾಜ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ(ಸಮನ್ವಯ & ಭೂ ಮಂಜೂರಾತಿ-3)

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು (ರಾಜ್ಯ ಪತ್ರದ ಮುಂದಿನ ವಿಶೇಷ ಸಂಚಿಕೆಯಲ್ಲಿ ಪ್ರಕಟಿಸಿ 100 ಪ್ರತಿಯನ್ನು ಕಂದಾಯ ಇಲಾಖೆಗೆ ಕಳುಹಿಸಲು ಕೋರಲಾಗಿದೆ.)

ಇವರಿಗೆ:

1. ಎಲ್ಲಾ ಪ್ರಾದೇಶಿಕ ಆಯುಕ್ತರು.
2. ಎಲ್ಲಾ ಜಿಲ್ಲಾಧಿಕಾರಿಗಳು.

..4

3. ಸ್ಟೇಟ್ ಇನ್‌ಫಾರ್ಮ್ಯಾಟಿಕ್ಸ್ ಅಧಿಕಾರಿ, ಎನ್.ಐ.ಸಿ., ಕರ್ನಾಟಕ ಘಟಕ, ಬೆಂಗಳೂರು.
4. ಎಲ್ಲಾ ಉಪ ವಿಭಾಗಾಧಿಕಾರಿಗಳಿಗೆ (ಜಿಲ್ಲಾಧಿಕಾರಿಗಳ ಮೂಲಕ)
5. ಎಲ್ಲಾ ತಹಶೀಲ್ದಾರ್‌ಗಳಿಗೆ (ಜಿಲ್ಲಾಧಿಕಾರಿಗಳ ಮೂಲಕ)
6. ಕಛೇರಿ ಪ್ರತಿ.

<u>ಪ್ರತಿಯನ್ನು, ಮಾಹಿತಿಗಾಗಿ :</u>

1. ಮಾನ್ಯ ಕಂದಾಯ ಸಚಿವರ ಆಪ್ತ ಕಾರ್ಯದರ್ಶಿಯವರು, ಕರ್ನಾಟಕ ಸರ್ಕಾರ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಕಂದಾಯ ಇಲಾಖೆ, ಬಹುಮಹಡಿಕಟ್ಟಡ, ಬೆಂಗಳೂರು.
3. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಕಂದಾಯ ಇಲಾಖೆ(ವಿಪತ್ತು ನಿರ್ವಹಣೆ), ಬಹುಮಹಡಿಕಟ್ಟಡ, ಬೆಂಗಳೂರು.